सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

29ನೇ ಜೂನ್, 2016

**ಸನ್ಮಾನ್ಯ ಸಿದ್ದರಾಮಯ್ಯ ನವರೇ,**

ನಗರದ ಬಸವೇಶ್ವರ ವೃತ್ತದಿಂದ ಹೆಬ್ಬಾಳ ಮೇಲ್ಸೆತುವೆವರೆಗಿನ ಉದ್ದೇಶಿತ ಉಕ್ಕಿನ ಮೇಲುರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿ ಅನೇಕ ನಾಗರಿಕರಿಂದ ಮತ್ತು ನಿವಾಸಿ ಕಲ್ಯಾಣ ಸಂಘಟನೆಗಳಿಂದ ಹಲವಾರು ವಿನಂತಿಗಳು ಮತ್ತು ನಿರೂಪಣೆಗಳು ನನಗೆ ತಲುಪಿವೆ.

ಅವರೆಲ್ಲರ ಪರವಾಗಿ, ಬೆಂಗಳೂರು ನಗರದ ನಾಗರಿಕನಾಗಿ ಮತ್ತು ನಗರವನ್ನು ಪ್ರತಿನಿಧಿಸುವ ಒಬ್ಬ ಸಂಸತ್ ಸದಸ್ಯನಾಗಿ, ಈ ವಿಷಯವನ್ನು ಸರ್ಕಾರ ನಿಭಾಯಿಸಿದ ರೀತಿಯಿಂದ ಅತೀವ ಬೇಸರಗೊಂಡು, ಕಿಂಚಿತ್ ಆಕ್ರೋಶದಿಂದಲೇ ಈ ಪತ್ರವನ್ನು ಬರೆಯುತ್ತಿದ್ದೇನೆ.

ಇತ್ತ ನಾಗರಿಕರ ಪರವೂ ಅಲ್ಲದ, ಅತ್ತ ಸಮರ್ಪಕವಾಗಿ ಯೋಜಿತವೂ ಅಲ್ಲದ, ಈ ನಿರ್ಮಾಣ ಪ್ರಸ್ತಾವವನ್ನು, ಕೇವಲ ರಾಜಕೀಯ ಮತ್ತು ಗುತ್ತಿಗೆದಾರರ ಲಾಭಕ್ಕಾಗಿ ರೂಪಿಸಿರುವ ಯೋಜನೆಯೆಂದು ಹೇಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ. ಇದು ಸಾರ್ವಜನಿಕ ಹಣದ ನಿರ್ಲಜ್ಜ ದುರುಪಯೋಗವಾಗಿದ್ದು, ಸಾಂವಿಧಾನಿಕ ಆಶಯದನುಸಾರ ಸ್ಥಾಪನೆಗೊಂಡ ಬೆಂಗಳೂರು ಮಹಾನಗರ ಯೋಜನಾ ಸಮಿತಿ (ಬಿ.ಎಂ.ಪಿ.ಸಿ)ಯ ಪರಾಮರ್ಶೆಗೆ ನೀಡಲಾಗಿಲ್ಲ ಮತ್ತು ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಸಿದ್ಧಪಡಿಸುವಾಗ ಸಾರ್ವಜನಿಕ ಸಮಾಲೋಚನೆಯನ್ನು ನಡೆಸಲಾಗಿಲ್ಲದ್ದರಿಂದ, ಪ್ರಸ್ತಾವಿತ ಯೋಜನೆಯೇ 'ಅಕ್ರಮ'ವಾಗಿದೆ. ಯೋಜನೆಯ ಸಾಧಕ-ಬಾಧಕಗಳ ಅಧ್ಯಯನವನ್ನು ನಡೆಸಿ ಮತ್ತು ವಿಮರ್ಶೆಗಾಗಿ ಅದನ್ನು ಸಾರ್ವಜನಿಕ ವಲಯದಲ್ಲಿ ಮಂಡಿಸಲಾಗಿಲ್ಲ ಹಾಗು ಪಾರದರ್ಶಕತೆಯನ್ನು ಕಡೆಗಣಿಸಲಾಗಿದೆ. ಮಾಧ್ಯಮಗಳ ವರದಿಗಳಂತೆ, ಈ ಪ್ರಸ್ತಾವಿತ ಯೋಜನೆಗಾಗಿ 500ಕ್ಕೂ ಅಧಿಕ ಬೃಹತ್ ಮರಗಳನ್ನು ಕತ್ತರಿಸಬೇಕಾಗಿರುತ್ತದೆ.

ಈ ಯೋಜನೆಯ ಕುರಿತಂತೆ ಉತ್ತರಗಳಿಲ್ಲದ ಅನೇಕ ಪ್ರಶ್ನೆಗಳೆದ್ದಿವೆ. ಈ ಅವಸರವೇಕೆ? ವಿನ್ಯಾಸ, ಪರಿಸರದ ಮೇಲಾಗುವ ಪರಿಣಾಮಗಳ ಅಧ್ಯಯನ ನಡೆಸಲಾಗಿದೆಯೇ? ನಗರ ಸೌಂದರ್ಯ ವಿಷಯಗಳ ಅವಗಣನೆಯೇಕೆ? ಏಕೆ ಇತರ ಮೇಲುರಸ್ತೆಗಳಂತೆ ಇಲ್ಲಿ ಕಾಂಕ್ರೀಟ್ ಬಳಕೆಯಿಲ್ಲ? ಭವಿಷ್ಯದ ನಿರ್ಮಾಣಗಳಿಗೆ ಹೊಂದಿಕೆಯಾಗುವಂತೆ ಮತ್ತು ಎಲಿವೇಟೆಡ್ ಕಾರಿಡಾರುಗಳೊಂದಿಗೆ ಇದನ್ನು ಬೆಸೆಯುವುದು ಸಾಧ್ಯವಿದೆಯೇ? ಇಂತಹ ಅನೇಕ ಪ್ರಶ್ನೆಗಳನ್ನು ನಾಗರಿಕರು ಕೇಳುತ್ತಿದ್ದಾರೆ. ಇದನ್ನು ಪ್ರಾಯೋಜಿಸುತ್ತಿರುವ ಬಿಡಿಎ ಮತ್ತು ಅದರ ಮೇಲ್ವಿಚಾರಕ ಅಧಿಕಾರಿಗಳ ಮೇಲೆ ಈಗಾಗಲೇ ಅನೇಕ ಪ್ರಶ್ನಾರ್ಹ ನಿರ್ಧಾರಗಳ ಮತ್ತು ಆರ್ಥಿಕ ಅವ್ಯವಹಾರಗಳ ಆಪಾದನೆಗಳಿವೆ.



11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते

ಬೆಂಗಳೂರಿನ ನಾಗರಿಕರು ತಮ್ಮ ನಗರದ ಅಭಿವೃದ್ಧಿ ವಿಷಯಗಳಲ್ಲಿ ತಮ್ಮ ಅಭಿಪ್ರಾಯದ ಹಕ್ಕನ್ನು ಪ್ರತಿಪಾದಿಸಲು ಸಿದ್ಧರಿದ್ದಾರೆ ಎಂಬುದಕ್ಕೆ ಪ್ರಸಕ್ತ ಯೋಜನೆಗೆ ವ್ಯಕ್ತವಾಗುತ್ತಿರುವ ಭಾರಿ ವಿರೋಧವೇ ಸಾಕ್ಷಿಯಾಗಿದೆ. ಈಗ ದೊರಕುತ್ತಿರುವುದಕ್ಕಿಂತಲೂ ಇನ್ನು ಅಧಿಕ ಉತ್ತಮ ಸೌಲಭ್ಯಗಳನ್ನು ಪಡೆಯಲು ನಮ್ಮ ನಗರ ಮತ್ತು ನಾಗರಿಕರಿಗೆ ಸಹಜವಾದ ಅರ್ಹತೆಯಿದೆ. ನಾಗರಿಕರ ಸಹಭಾಗಿತ್ವದೊಂದಿಗೆ, ಅವರ ಅಭಿಲಾಶೆಗಳಿಗೆ ಪೂರಕವಾಗಿ ಕೆಲಸಮಾಡುವ ಸರ್ಕಾರ ಮತ್ತು ಇಲಾಖೆಗಳು ಅಗತ್ಯವೇ ಹೊರತು ಪ್ರಸಕ್ತ ಸನ್ನಿವೇಶದಲ್ಲಿರುವಂತೆ ನಿವಾಸಿಗಳು ಮತ್ತು ಸರ್ಕಾರದ ನಡುವಿನ ಸಂಘರ್ಷಮಯ ವಾತಾವರಣಗಳಲ್ಲ.

ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳಿಗೆ, ಅದರಲ್ಲೂ ನಿರ್ದಿಷ್ಟವಾಗಿ ಸಾರಿಗೆ ಮತ್ತು ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಇದಕ್ಕೆ ನಗರದ ವಿನ್ಯಾಸ ಅಥವಾ ಗಾತ್ರಕ್ಕಿಂತಲೂ, ಇದು ನೇರವಾಗಿ ಯೋಜನಾಬದ್ಧ ನಿರ್ವಹಣೆ ಮತ್ತು ಇಲಾಖೆಗಳ ಕಾರ್ಯಕ್ಷಮತೆಯಂತಹ ಮೂಲಭೂತ ವಿಷಯಗಳ ಪ್ರತಿಫಲವಾಗಿದೆ. ವಾಹನ ದಟ್ಟಣೆ ಮಾತ್ರವಲ್ಲ, ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಕೊರತೆ, ಡೆಂಗ್ಯೂ ಮುಂತಾದ ರೋಗಗಳು, ಅಸಮರ್ಪಕ ತ್ಯಾಜ್ಯ ನಿರ್ವಹಣೆ, ಶುದ್ಧ ನೀರಿನ ಅಲಭ್ಯತೆ ಮುಂತಾದ ನಗರ ಎದುರಿಸುತ್ತಿರುವ ಹಲವಾರು ಸಮಸ್ಯೆಗಳೇ, ಆಡಳಿತದಲ್ಲಿ ಯೋಜನಾಬದ್ಧ ನಿರ್ವಹಣೆಯಿಲ್ಲದಿರುವುದನ್ನು ಸಾರಿ ಹೇಳುತ್ತಿವೆ. ಪರಿಶೀಲನೆಗೆ ಒಳಪಡಿಸದೆ ಅಥವಾ ಪ್ರಶ್ನೆಗಳನ್ನೆತ್ತದೆ, ಸಾರ್ವಜನಿಕ ಹಣದಲ್ಲಿ ಇಂತಹ ಅನೇಕ ಯೋಜನೆಗಳನ್ನು ಆರಂಭಿಸಿ, ಯಾವ ಅಡೆತಡೆಯಿಲ್ಲದೆ, ರಾಜಕೀಯ ಮತ್ತು ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯಕ್ಕಾಗಿಯೇ, ಸಮರ್ಪಕ ಯೋಜನಾಬದ್ಧ ವಿಧಾನಗಳನ್ನು ಆಡಳಿತದಲ್ಲಿ ಅಳವಡಿಸಿಕೊಳ್ಳದಿರುವುದಕ್ಕೆ ನೇರ ಕಾರಣ.

ಬೆಂಗಳೂರಿಗೆ ಈಗ, ಹಣಕಾಸು ಯೋಜನೆಯೂ ಸೇರಿದಂತೆ, ಶಾಸನಬದ್ಧ ಸಮರ್ಪಕ ಧೀರ್ಘಕಾಲೀನ ಯೋಜನೆಯ ಅಗತ್ಯವಿದೆ. ಸದ್ಯ ಬಿಡಿಎ ಈ ನಿಟ್ಟಿನಲ್ಲಿ ಕೆಲಸಮಾಡುತ್ತಿದೆಯಾದರೂ, ಈ ಪ್ರಕ್ರಿಯೆಯಲ್ಲಿ ಪರಿಣಿತ ನಾಗರಿಕರು, ನಿವಾಸಿ ಅಭಿವೃದ್ಧಿ ಸಂಘಟನೆಗಳು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ತೊಡಗಿಸಿಕೊಂಡು ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು. ನಂತರ ಇದನ್ನು ಬೆಂಗಳೂರು ಮಹಾನಗರ ಯೋಜನಾ ಸಮಿತಿಯ (ಬಿ.ಎಂ.ಪಿ.ಸಿ) ಮುಂದೆ ಇಡಬೇಕು. ಅಲ್ಲಿ ಮುಕ್ತವಾಗಿ ಚರ್ಚಿಸಿ, ನಾಗರಿಕ ಸಮಾಲೋಚನೆಗಳ ನಂತರ ಅನುಮೋದಿಸಬೇಕು.

ರಾಜ್ಯ ಸರ್ಕಾರಕ್ಕೆ ಸಂವಿಧಾನದ 74ನೇ ತಿದ್ದುಪಡಿ ಮಸೂದೆ (ಸಿ.ಎ.ಎ)ಯನ್ನು ಅದರ ಆಶಯ ಮತ್ತು ಅಕ್ಷರಶಃ ಪಾಲಿಸಬೇಕೆಂಬ ಇಚ್ಛೆಯಿದ್ದಲ್ಲಿ ಮತ್ತು ನಗರದ ಅಭಿವೃದ್ಧಿ ವಿಷಯಗಳಲ್ಲಿ ನಾಗರಿಕರ ನ್ಯಾಯಯುತ ಧ್ವನಿಯನ್ನು ಖಚಿತಪಡಿಸಿಕೊಳ್ಳಬೇಕು ಎಂಬ ಬಯಕೆಯಿದ್ದಲ್ಲಿ, ಪ್ರಸ್ತುತ ವಿಷಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಎಚ್ಚರದಿಂದ ಕಾರ್ಯನಿರ್ವಹಿಸುವಂತೆ ಮತ್ತು ತನ್ನ ವ್ಯಾಪ್ತಿಯನ್ನು ಮೀರದಂತೆ ಖಾತ್ರಿಪಡಿಸಿಕೊಳ್ಳಲು ತಾವು ಈ ಕೂಡಲೇ ಮಧ್ಯಪ್ರವೇಶಿಸಬೇಕು. ಈ ಯೋಜನೆ ಮಾತ್ರವಲ್ಲ, ಎಲ್ಲ ಮಧ್ಯಾವಧಿ ಮತ್ತು ಧೀರ್ಘಾವಧಿ ಯೋಜನೆಗಳು ಸಿದ್ಧವಾದ ನಂತರ, ಸಂವಿಧಾನಾತ್ಮಕ ಅಧಿಕಾರವನ್ನು ಹೊಂದಿರುವ ಎಂ.ಪಿ.ಸಿ ಯಲ್ಲಿ ಮಂಡಿಸಿ, ಕೂಲಂಕುಶವಾಗಿ ಚರ್ಚೆಯಾಗಬೇಕು.

ಸತ್ಯಮೇವ ಜಯತೇ

ಸ್ಥೂಲವಾಗಿ ಹೇಳಬೇಕೆಂದರೆ, ನಗರಾಡಳಿತವು ಅವ್ಯವಸ್ಥೆಯ ಗೂಡಾಗಿದೆ ಮತ್ತು ಬಿಕ್ಕಟ್ಟು ನಿರ್ವಹಣೆಗಾಗಿಯೇ ಇರುವಂತಾಗಿದೆ. ಜನತೆಗೆ ಉತ್ತಮ ಆಡಳಿತದ ಭರವಸೆಯನ್ನು ನೀಡಿದ್ದ ತಮಗೆ ಇದು ಅತ್ಯಂತ ಪ್ರಮುಖ ಸಂಗತಿಯಾಗಬೇಕು. ಮಿತಿಮೀರಿದ ಭ್ರಷ್ಟಾಚಾರ, ಪಾರದರ್ಶಕತೆಯ ಕೊರತೆ, ದೋಷಪೂರಿತ ಗುತ್ತಿಗೆ ಪದ್ಧತಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ನಗರದ ಆಡಳಿತ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿವೆ. ಸಹಜವಾಗಿಯೇ ಇದು ನಾಗರೀಕರ ಆಕ್ರೋಶಕ್ಕೆ ಕಾರಣವಾಗಿದೆ.

ಸಂವಿಧಾನಾತ್ಮಕ ಎಂ.ಪಿ.ಸಿ ಯನ್ನು ಎತ್ತಿಹಿಡಿಯಬೇಕು ಮತ್ತು ತಮ್ಮ ಉತ್ತಮ ಆಡಳಿತ ಭರವಸೆಯನ್ನು ಈಡೇರಿಸಬೇಕೆಂದು ನಾನು ಈ ಮೂಲಕ ತಮ್ಮನ್ನು ಒತ್ತಾಯಿಸುತ್ತಿದ್ದೇನೆ. ಇಲ್ಲದಿದ್ದಲ್ಲಿ ನಾಗರಿಕರ ವಿರೋಧವನ್ನು ಎದುರಿಸಬೇಕಾದೀತು. ಹಾಗೆಯೇ, ಸಾರಿಗೆಯೂ ಸೇರಿದಂತೆ, ನಗರದ ಸರ್ವಾಂಗೀಣ ಅಭಿವೃದ್ಧಿಗಾಗಿ, ಬಿಎಂಪಿಸಿಯಿಂದ ಅನುಮೋದನೆ ಪಡೆದ ಬಹುವರ್ಷೀಯ ಯೋಜನಾ ನೀಲಿನಕ್ಷೆಯನ್ನು ಸಿದ್ಧಪಡಿಸಿ, ನಂತರ ಹಂತಹಂತವಾಗಿ ಅದನ್ನು ಜಾರಿಗೆ ತರಬೇಕೆಂದು ಆಗ್ರಹಿಸುತ್ತಿದ್ದೇನೆ.

ಈ ನಿಟ್ಟಿನಲ್ಲಿ ತಾವು ಕೂಡಲೇ ಕಾರ್ಯಪ್ರವೃತ್ತರಾಗುವಿರೆಂದು ಆಶಿಸುತ್ತೇನೆ. ಇಲ್ಲದಿದ್ದಲ್ಲಿ, ನಗರವನ್ನು ಸಂರಕ್ಷಿಸಲು ಬಯಸುವ ಲಕ್ಷಾಂತರ ಪ್ರಾಮಾಣಿಕ, ಶ್ರಮಿಕ ನಾಗರಿಕರ ಮತ್ತು ಅವರ ಕುಟುಂಬದ ಪರವಾಗಿ, ಸೂಕ್ತ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು, ಇತರ ವೇದಿಕೆಗಳ ಮೊರೆಹೋಗುವುದು ಅನಿವಾರ್ಯವಾದೀತು.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯನವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು

ಪ್ರತಿಯನ್ನು:-
ಶ್ರೀ ಕೆ.ಜೆ.ಜಾರ್ಜ್, ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು, ವಿಧಾನಸೌಧ, ಬೆಂಗಳೂರು